NOVEMBER 08, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ; 5 ಸಾವಿರ ಘಟಕಗಳಿಗೆ, ಸಬ್ಸಿಡಿ ಪ್ರದಾನ.
- ಬೆಂಗಳೂರು–ಎರ್ನಾಕುಲಂ ಮಧ್ಯೆ, ವಂದೇ ಭಾರತ, ಎಕ್ಸಪ್ರೆಸ್ ರೈಲು ಸೇವೆ; ವಾರಾಣಸಿಯಲ್ಲಿ, ಪ್ರಧಾನಮಂತ್ರಿ ಇಂದು ಚಾಲನೆ.
- ಧಾರವಾಡ ರಾಜ್ಯಾಧ್ಯಕ್ಷ ಪೆವಿಲಿಯನ್‌ನಲ್ಲಿ, ಪುರುಷರ ಲಾನ್ ಟೆನಿಸ್, ರಾಜ್ಯ ಮಟ್ಟದ ಪಂದ್ಯಾವಳಿಗೆ, ಚಾಲನೆ.
- ಇಂದು, ಸಂತ ಶ್ರೀ ಕನಕದಾಸರ, ಜಯಂತ್ಯುತ್ಸವ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ – ಕೆಪೆಕ್ ಸಂಸ್ಥೆ, ರಾಜ್ಯದಲ್ಲಿ ಒಟ್ಟು 5 ಸಾವಿರ ಘಟಕಗಳಿಗೆ, ಸಬ್ಸಿಡಿ ಒದಗಿಸಿದೆ ಎಂದು, ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ. ಶಿವಮೊಗ್ಗದ, ನವುಲೆಯ ಶಿವಪ್ಪನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ, ಕೃಷಿ ಮಹಾವಿದ್ಯಾಲಯದಲ್ಲಿ ಆಯೋಜಿತ, 'ಸಹಕಾರ ಕೃಷಿಯಿಂದ, ಸುಸ್ಥಿರ ಕೃಷಿ' ಧ್ಯೇಯದ, ನಾಲ್ಕು ದಿನಗಳ, ಕೃಷಿ ಮತ್ತು ತೋಟಗಾರಿಕೆ ಮೇಳವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಕೃಷಿಯನ್ನು ಲಾಭದಾಯಕವಾಗಿ ಪರಿವರ್ತಿಸಿ, ರೈತರಿಗೆ ಉತ್ತಮ ಆದಾಯ ದೊರಕಿಸಲು, ಕೇಂದ್ರ ಹಾಗೂ ರಾಜ್ಯ ಸರ್ಕಾರ, ಹಲವು ಮಹತ್ವದ ರೈತಪರ ಯೋಜನೆಗಳನ್ನು ರೂಪಿಸಿವೆ, ಎಂದರು.

<><><>

ಪ್ರತಿ ಟನ್ ಕಬ್ಬಿಗೆ, 3 ಸಾವಿರದ 300 ರೂಪಾಯಿ, ಕಬ್ಬು ಬೆಳೆಗಾರರಿಗೆ ನೀಡಲು, ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಜರುಗಿದ, ಸಕ್ಕರೆ ಕಾರ್ಖಾನೆಗಳ ಮಾಲಿಕರು ಹಾಗೂ ಕಬ್ಬು ಬೆಳೆಗಾರರ ಜೊತೆ ನಡೆದ, ಸುದೀರ್ಘ ಸಭೆ ಬಳಿಕ, ನಿರ್ಧರಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆಯ ಬಳಿಕ, ಮಾಹಿತಿ ನೀಡಿ, ರಾಜ್ಯದಲ್ಲಿ ಒಂದು ಸರ್ಕಾರಿ ಸಕ್ಕರೆ ಕಾರ್ಖಾನೆ ಹಾಗೂ 11 ಸಹಕಾರಿ

ಸಕ್ಕರೆ ಕಾರ್ಖಾನೆಗಳು ಸೇರಿ, ಒಟ್ಟು 81 ಸಕ್ಕರೆ ಕಾರ್ಖಾನೆಗಳಿವೆ. ಕಾರ್ಖಾನೆ ಮಾಲಿಕರು ಹಾಗೂ ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ, ಶಾಶ್ವತ ಪರಿಹಾರ ಕಂಡುಕೊಳ್ಳಲು, ಕೇಂದ್ರಕ್ಕೆ ನಿಯೋಗ ಕೊಂಡೊಯ್ಯಲಾಗುವುದು ಎಂದರು. ಬೆಳಗಾವಿ ಜಿಲ್ಲೆ, ಗುರ್ಲಾಪುರ ಕ್ರಾಸ್‌ನಲ್ಲಿ, ಕಬ್ಬು ಬೆಳೆಗಾರರು ಹಲವು ದಿನಗಳಿಂದ ನಡೆಸುತ್ತಿದ್ದ, ಅಹೋರಾತ್ರಿ ಧರಣಿಯನ್ನು, ಹಿಂಪಡೆದಿದ್ದಾರೆ.

<><><>

ಎರ್ನಾಕುಲಂ ಹಾಗೂ ಕೆ.ಎಸ್.ಆರ್–ಬೆಂಗಳೂರು ಮಧ್ಯೆ ಸಂಚರಿಸಲಿರುವ, ವಂದೇ ಭಾರತ ಎಕ್ಸ್‌ಪ್ರೆಸ್ ರೈಲು ಸೇರಿದಂತೆ, 4 ಹೊಸ ವಂದೇ ಭಾರತ ಎಕ್ಸ್‌ಪ್ರೆಸ್ ರೈಲುಗಳಿಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ಇಂದು, ವಾರಾಣಸಿಯಲ್ಲಿ, ಚಾಲನೆ ನೀಡಲಿದ್ದಾರೆ. ಬೆಂಗಳೂರಿನ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೇಲ್ವೆ ನಿಲ್ದಾಣದಲ್ಲಿ, ನೂತನ ವಂದೇ ಭಾರತ ಎಕ್ಸ್‌ಪ್ರೆಸ್ ರೈಲಿನ ಸ್ವಾಗತ ಸಮಾರಂಭ, ಇಂದು ಸಂಜೆ 5 ಗಂಟೆಗೆ ಜರುಗಲಿದೆ. ಜನ ಪ್ರತಿನಿಧಿಗಳು ಹಾಗೂ ಗಣ್ಯರು ಭಾಗವಹಿಸಲಿದ್ದಾರೆ. ವಂದೇ ಭಾರತ ನೂತನ ರೈಲು, ಪ್ರಯಾಣದ ಸಮಯವನ್ನು ಗಣನೀಯವಾಗಿ ಕಡಿಮೆ ಗೊಳಿಸಿ, ಪ್ರಾದೇಶಿಕ ಸಂಚಾರ ವ್ಯವಸ್ಥೆಗೆ ಬಲ ತುಂಬಲಿದೆ. ಪ್ರವಾಸೋದ್ಯಮ ಮತ್ತು ಆರ್ಥಿಕ ಚಟುವಟಿಕೆಗಳನ್ನು ಉತ್ತೇಜಿಸಲಿದೆ ಎಂದು, ನೈಋತ್ಯ ರೇಲ್ವೆ ಪ್ರಕಟಣೆ ತಿಳಿಸಿದೆ.

<><><>

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದಡಿ, ಅನುಕಂಪದಡಿ, ಸಾವಿರ ಜನರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ; 37 ಜನರಿಗೆ ಹೊಸದಾಗಿ, ನೇಮಕಾತಿ ಆದೇಶ ನೀಡಲಾಗಿದೆ ಎಂದು, ಸಾರಿಗೆ ಖಾತೆ ಸಚಿವ, ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ. ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಗೋಕುಲ ರಸ್ತೆಯ, ನವೀಕೃತ ನೂತನ ಬಸ್ ನಿಲ್ದಾಣವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

<><><>

ರಾಮಲಿಂಗಾ ರೆಡ್ಡಿ ಧ್ವನಿ 27 ಸೆಕೆಂದುಗಳು

<><><>

13 ಕೋಟಿ 11 ಲಕ್ಷ ರೂಪಾಯಿ ವೆಚ್ಚದಲ್ಲಿ, ನೂತನವಾಗಿ ನಿರ್ಮಾಣಗೊಂಡ, ಧಾರವಾಡ ನಗರ ಸಾರಿಗೆ ಬಸ್ ನಿಲ್ದಾಣವನ್ನು, ಸಾರಿಗೆ ಖಾತೆ ಸಚಿವ ರಾಮಲಿಂಗಾರೆಡ್ಡಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಉದ್ಘಾಟಿಸಿದರು. 11 ನೂತನ ನಗರ ಸಾರಿಗೆ ಬಸ್‌ಗಳಿಗೆ ಸಚಿವರು ಚಾಲನೆ ನೀಡಿದರು.

<><><>

ಬಂಗಾಳದ ಕವಿ, ಬಂಕಿಮಚಂದ್ರರು ವಿರಚಿತ, ಆನಂದಮಠ ಕಾದಂಬರಿಯ, 'ವಂದೇ ಮಾತರಂ' ಗೀತೆಗೆ 150 ವರ್ಷಗಳು ಪೂರ್ಣಗೊಂಡ ಹಿನ್ನೆಲೆ, ನೈಋತ್ಯ ರೇಲ್ವೆ ಹುಬ್ಬಳ್ಳಿಯ ವಿಭಾಗೀಯ ಪ್ರಧಾನ ಕಚೇರಿಯಲ್ಲಿ, ಪ್ರಧಾನ ವ್ಯವಸ್ಥಾಪಕ ಮುಕುಲ್ ಸರನ್ ಮಾಥುರ್ ನೇತೃತ್ವದಲ್ಲಿ, ಅಧಿಕಾರಿಗಳು ಹಾಗೂ ಸಿಬ್ಬಂದಿ, ವಂದೇ ಮಾತರಂ ಸಾಮೂಹಿಕ ಗೀತ ಗಾಯನ ಪ್ರಸ್ತುತ ಪಡಿಸಿದರು. ಕೊಪ್ಪಳ ಜಿಲ್ಲಾಡಳಿತ ಭವನದಲ್ಲಿ ಜರುಗಿದ, 'ವಂದೇ ಮಾತರಂ' ರಾಷ್ಟ್ರೀಯ ಗೀತ ಗಾಯನ ಕಾರ್ಯಕ್ರಮದಲ್ಲಿ, ಶಕುಂತಲಾ ಬೆನ್ನಾಳ ಹಾಗೂ ತಂಡ, ವಂದೇ ಮಾತರಂ, ಸಾಮೂಹಿಕ ಗಾನವನ್ನು ಪ್ರಸ್ತುತಪಡಿಸಿತು. ಜಿಲ್ಲಾಧಿಕಾರಿ ಸುರೇಶ ಇಟ್ನಾಳ್ ಮಾತನಾಡಿ, ವಂದೇ ಮಾತರಂ ರಾಷ್ಟ್ರಿಯ ಗೀತೆ, ರಾಷ್ಟ್ರೀಯ ಐಕ್ಯತೆಯನ್ನು ಬಿಂಬಿಸುತ್ತದೆ ಎಂದರು. ಬಾಗಲಕೋಟೆಯ, ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ, 'ವಂದೇ ಮಾತರಂ' 150ನೇ ವಾರ್ಷಿಕೋತ್ಸವದಲ್ಲಿ, ರಾಜ್ಯಸಭೆ ಸಂಸದ ನಾರಾಯಣಸಾ ಭಾಂಡಗೆ ಪಾಲ್ಗೊಂಡು, ವಂದೇ ಮಾತರಂ ದೇಶಾಭಿಮಾನ, ಏಕತೆ ಹಾಗೂ ತ್ಯಾಗದ ಸಂಕೇತವಾಗಿದೆ ಎಂದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರಿಯುವುದು

<><><>

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

ಇಂದು ಸಂತ ಕವಿ, ಶ್ರೀ ಕನಕದಾಸರ ಜಯಂತ್ಯುತ್ಸವ. ಕಾರ್ತಿಕ ಮಾಸದ, 18ನೇ ದಿನ, ಶ್ರೀ ಕನಕದಾಸರ ಜಯಂತಿಯನ್ನು, ನಾಡಿನಾದ್ಯಂತ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಗುತ್ತದೆ. 15-16ನೇ ಶತಮಾನದ, ಭಕ್ತಿ ಪಂಥದ ಶ್ರೀ ಕನಕದಾಸರು, ಕರ್ನಾಟಕ ಸಂಗೀತಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ.

<><><>

ಶ್ರೀ ಕನಕದಾಸರ ಜಯಂತಿ ಶುಭಾಶಯ ಕೋರಿರುವ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕನಕದಾಸರ ಕರ್ಮಭೂಮಿ, ಕಾಗಿನೆಲ್ಲಿ ಹಾಗೂ ಜನ್ಮ ಸ್ಥಳ, ಬಾಡ ಗ್ರಾಮ ಸೇರಿದಂತೆ, ಸುತ್ತಲಿನ ಐತಿಹಾಸಿಕ ಸ್ಥಳಗಳ ಅಭಿವೃದ್ಧಿಗೆ, 34 ಕೋಟಿ ರೂಪಾಯಿ ಯೋಜನಾ ಪ್ರಸ್ತಾವಗಳಿಗೆ ಮಂಜೂರಾತಿ ನೀಡಲಾಗಿದೆ ಎಂದಿದ್ದಾರೆ. ಭಕ್ತಿ ತತ್ವದ ಮೂಲಕ, ಸಮತೆಯ ಸಾರವನ್ನು ಸಾರಿದ ಸಂತ ಶ್ರೀ ಕನಕದಾಸರ ಜಯಂತಿಯನ್ನು, ಇಂದು ಧಾರವಾಡ ಸೇರಿದಂತೆ, ರಾಜ್ಯದ 31 ಜಿಲ್ಲಾಡಳಿತಗಳು ಆಯೋಜಿಸಿವೆ. ವಿಶೇಷ ಉಪನ್ಯಾಸ, ಜಾಥಾ ಹಾಗೂ ಪ್ರದರ್ಶಿನಿಗಳು ಏರ್ಪಾಡಾಗಿವೆ.

<><><>

ಉತ್ತರಕನ್ನಡ ಜಿಲ್ಲೆಯ, ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ, ಇಂದು ಮಧ್ಯಾಹ್ನ 3.30ಕ್ಕೆ ಅಘನಾಶಿನಿ ಉಳಿಸಿ ಜಾಥಾ ಹಾಗೂ ಜಾಗೃತಿ ಸಮಾವೇಶವನ್ನು, ಸಿದ್ದಾಪುರದ, ಹೆಗ್ಗರಣಿ, ಶ್ರೀ ಸ್ವಾಮಿ ವಿವೇಕಾನಂದ ಪ್ರೌಢ ಶಾಲೆ ಆವರಣದಲ್ಲಿ ಆಯೋಜಿಸಿದೆ. ಉತ್ತರಕನ್ನಡ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಭೀಮಣ್ಣ ನಾಯ್ಕ ಹಾಗೂ ಪರಿಸರಾಸಕ್ತರು, ಧಾರ್ಮಿಕ ವರಿಷ್ಠರು ಪಾಲ್ಗೊಳ್ಳಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಬೇಡ್ತಿ, ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಸಂಚಾಲಕ, ಸಿದ್ದಾಪುರದ ಗೋಪಾಲಕೃಷ್ಣ ತಂಗಾರ್ಮನೆ.

<><><>

ಗೋಪಾಲಕೃಷ್ಣ ತಂಗಾರ್ಮನೆ ಧ್ವನಿ 37 ಸೆಕೆಂದುಗಳು

<><><>

ಧಾರವಾಡ ರಾಜ್ಯಾಧ್ಯಕ್ಷ ಪೆವಿಲಿಯನ್‌ನಲ್ಲಿ, ಧಾರವಾಡ ಲಾನ್ ಟೆನಿಸ್ ಅಸೋಸಿಯೇಶನ್ ಸಾರಥ್ಯದಲ್ಲಿ ಆಯೋಜನೆಗೊಂಡ, ಪುರುಷರ ಲಾನ್ ಟೆನಿಸ್ ರಾಜ್ಯ ಮಟ್ಟದ ಪಂದ್ಯಾವಳಿಗೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, ಬೆಂಗಳೂರು ಹೊರತು ಪಡಿಸಿ, ಎಂಟು ಟೆನಿಸ್ ಕೋರ್ಟ್‌ಗಳನ್ನು ಹೊಂದಿರುವ ಹೆಗ್ಗಳಿಕೆಗೆ,

ಧಾರವಾಡದ ರಾಜ್ಯಾಧ್ಯಕ್ಷ ಪೆವಿಲಿಯನ್ ಪಾತ್ರವಾಗಿದೆ. ಪಂದ್ಯಾವಳಿಯಲ್ಲಿ, 300ಕ್ಕೂ ಹೆಚ್ಚು ಟೆನಿಸ್‌ಪಟುಗಳು ಪಾಲ್ಗೊಂಡಿದ್ದಾರೆ ಎಂದರು.

<><><>

ಇತ್ತೀಚೆಗೆ, ಆನ್ಲೈನ್ ಸೈಬರ್ ಅಪರಾಧಗಳು ಏರುಗತಿಯಲ್ಲಿದ್ದು, ಆನ್ಲೈನ್‌ನಲ್ಲಿ ಆರ್ಥಿಕ ವ್ಯವಹಾರ ನಿಭಾಯಿಸುವಾಗ, ಅತ್ಯಂತ ಜಾಗರೂಕರಾಗಿರಬೇಕು ಎಂದು, ವಿಜಯಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಲಕ್ಷ್ಮಣ ನಿಂಬರಗಿ ಕೋರಿದ್ದಾರೆ. ಬಿ.ಎಲ್.ಡಿ.ಇ. ಸ್ವಾಯತ್ತ ವಿಶ್ವವಿದ್ಯಾಲಯದ, ಕೇಂದ್ರಿಯ ಗ್ರಂಥಾಲಯ ಸಭಾಂಗಣದಲ್ಲಿ ಆಯೋಜಿಸಿದ್ದ, ಸೈಬರ್ ಕಾನೂನು ಮತ್ತು ಸೈಬರ್ ಅಪರಾಧಗಳ ಕುರಿತ, ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ, ಅವರು ಮಾತನಾಡಿದರು. ಸೈಬರ್ ಅಪರಾಧಗಳ ಪತ್ತೆ ಹಾಗೂ ತ್ವರಿತ ಪ್ರಕರಣ ದಾಖಲಾತಿಗೆ, ತರಬೇತಿ ಪಡೆದ 100 ಸಿಬ್ಬಂದಿ ಜಿಲ್ಲೆಯಲ್ಲಿ, ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ ನಿಯಮಿತ; 5 ಸಾವಿರ ಘಟಕಗಳಿಗೆ, ಸಬ್ಸಿಡಿ ಪ್ರದಾನ.

ಬೆಂಗಳೂರು–ಎರ್ನಾಕುಲಂ ಮಧ್ಯೆ, ವಂದೇ ಭಾರತ, ಎಕ್ಸಪ್ರೆಸ್ ರೈಲು ಸೇವೆ; ವಾರಾಣಸಿಯಲ್ಲಿ, ಪ್ರಧಾನಮಂತ್ರಿ ಇಂದು ಚಾಲನೆ.

ಧಾರವಾಡ ರಾಜ್ಯಾಧ್ಯಕ್ಷ ಪೆವಿಲಿಯನ್‌ನಲ್ಲಿ, ಪುರುಷರ ಲಾನ್ ಟೆನಿಸ್, ರಾಜ್ಯ ಮಟ್ಟದ ಪಂದ್ಯಾವಳಿಗೆ, ಚಾಲನೆ.

ಇಂದು, ಸಂತ ಶ್ರೀ ಕನಕದಾಸರ, ಜಯಂತ್ಯುತ್ಸವ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ

<><><>